# 3. ಜ್ಯೋತಿಯೇ ಆಗು ಜಗಕೆಲ್ಲ

– ಜನಪದ ಗೀತೆ

**ಕೃತಿಕಾರರ ಪರಿಚಯ :**

ನಿರಕ್ಷರಸ್ಥರಾದ ಗ್ರಾಮೀಣ ಜನರು ತಮ್ಮ ಜೀವನಾನುಭವಗಳನ್ನು ಸಹಜವಾಗಿಯೇ ಅಭಿವ್ಯಕ್ತಿಸುವ ಜನಪದ ಸಾಹಿತ್ಯ ಕಂಠಸ್ಥ ಸಂಪ್ರದಾಯದಲ್ಲಿ ಬೆಳೆದುಬಂದಿದೆ. ಶುದ್ಧ ದೇಸೀಯ ಸೊಗಡನ್ನು ಹೊಂದಿರುವ ಜನಪದ ಗೀತೆಗಳು ಸತ್ವಯುತವಾಗಿದ್ದು ವಿವೇಕವನ್ನು ಹೇಳುವ ನೀತಿ ವಾಕ್ಯಗಳಾಗಿವೆ.

ಪ್ರಕೃತ ತ್ರಿಪದಿಗಳನ್ನು, ದೇ.ಜವರೇಗೌಡ ಸಂಪಾದಿಸಿರುವ 'ಜನಪದ ಗೀತಾಂಜಲಿ' ಹಾಗೂ ಹಲಸಂಗಿ ಗೆಳೆಯರು ಸಂಪಾದಿಸಿರುವ 'ಗರತಿಯ ಹಾಡು' ಸಂಕಲನಗಳಿಂದ ಆಯ್ಕೆ ಮಾಡಿಕೊಳ್ಳಲಾಗಿದೆ.

Scanned with CamScanner

ಭಾವ - ಸಹೋದರಿಯ ಗಂಡ

ರೊಕ್ಕ - ಹಣ; ರೂಪಾಯಿ

ಸಂಸಾರ - ಕುಟುಂಬ; ಲೌಕಿಕ ಜೀವನ

ಸಾಗರ - ಸಮುದ್ರ; ಕಡಲ

ಹಡೆದವ್ವ - ಜನ್ಮ ನೀಡಿದ ತಾಯಿ

ಹೊರಳು (ಕ್ರಿ) - ಉರುಳು ; ಬದಲಾಗು; ಬಾಗು

ಅರಸ - ರಾಜ; ಶ್ರೇಷ್ಠ

ಇಟ್ಟು (ಕ್ರಿ) - ಇಡುವುದು; ಊಟಕ್ಕೆ ನೀಡಿ

ಕೈಲಾಸ - ಶಿವನ ನೆಲೆ

ಜ್ಯೋತಿ - ಬೆಳಕು; ದೀಪ

ಬಂಗಾರ - ಚಿನ್ನ; ಒಡವೆ

ಮದ್ದಿನ - ಮಧ್ಯಾಹ್ನ ; ನಡು ಹಗಲು

ಸಂತೆ - ನಿಯಮಿತ ಸ್ಥಳ ಹಾಗೂ ದಿನದಲ್ಲಿ ಕೊಡುಕೊಳ್ಳುವುದಕ್ಕೆ ಜನ ಸೇರುವುದು

ಸಾಂರಾಜ್ಯ - ಸಾಮ್ರಾಜ್ಯ; ರಾಜದ ಆಡಳಿತಕ್ಕೆ ಒಳಪಟ್ಟ ವಿಸ್ತಾರವಾದ ರಾಜ್ಯ

ಹಂಗಿಸು (ಕ್ರಿ) - ಹೀಯಾಳಿಸು; ವ್ಯಂಗ್ಯಮಾಡು

ಹೊತ್ತು - ಸಮಯ; ಕಾಲ

## II. ಪ್ರಶ್ನೆಗಳು :

**ಅ. ಕೆಳಗೆ ನೀಡಿರುವ 'ಅ' ಪಟ್ಟಿಯೊಂದಿಗೆ 'ಬ' ಪಟ್ಟಿಯನ್ನು ಹೊಂದಿಸಿ ಬರೆಯಿರಿ.**

| 'ಅ' ಪಟ್ಟಿ | 'ಬ' ಪಟ್ಟಿ |
|---|---|
| (1) ಅಕ್ಕ | (ಅ) ಸಾಗರ |
| (2) ಮಕ್ಕಳು | (ಆ) ಸಂತೆ |
| (3) ರೊಕ್ಕ | (ಇ) ಕಂತೆ |
| (4) ಸಂಸಾರ | (ಈ) ಭಾವ |
| | (ಉ) ಮನೆಮಾರು |

ಉತ್ತರ: 1–ಈ, 2–ಉ, 3–ಆ, 4–ಅ

Scanned with CamScanner

ಆ. ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿರಿ.

1. **ತಾಯಿ ತನ್ನ ಮಗನು ಯಾವ ಗುಣಗಳಿಗೆ ಒಡೆಯನಾಗಬೇಕೆಂದು ಬಯಸುತ್ತಾಳೆ?**

ಉ. ತನ್ನ ಮಗನು ಆಚಾರ-ವಿಚಾರ, ನೀತಿ ಹಾಗೂ ಮಾತಿನ ಗುಣಗಳಿಗೆ ಒಡೆಯನಾಗಬೇಕೆಂದು ತಾಯಿ ಬಯಸುತ್ತಾಳೆ.

2. **ಜನಪದರು ಸಂಸಾರವನ್ನು ಯಾವುದಕ್ಕೆ ಹೋಲಿಸಿದ್ದಾರೆ?**

ಉ. ಜನಪದರು ಸಂಸಾರವನ್ನು ಸಾಗರಕ್ಕೆ ಹೋಲಿಸಿದ್ದಾರೆ.

3. **ಈಸಬಲ್ಲವನಿಗೆ ಸಂಸಾರವೆಂಬ ಸಾಗರ ಹೇಗೆ ಕಾಣಿಸುತ್ತದೆ?**

ಉ. ಈಸಬಲ್ಲವನಿಗೆ ಸಂಸಾರವೆಂಬ ಸಾಗರ ಎದೆಯುದ್ದಕ್ಕೆ ಇರುವ ನೀರಿನಂತೆ ಕಾಣಿಸುತ್ತದೆ.

4. **ಸಂಸಾರವೆಂಬ ಸಾಗರದಲ್ಲಿ ಈಸುವುದು ಎಂದರೇನು?**

ಉ. ಸಂಸಾರವೆಂಬ ಸಾಗರದಲ್ಲಿ ಈಸುವುದು ಎಂದರೆ ಬದುಕಿನ ಕಷ್ಟಸುಖಗಳನ್ನು ಎದುರಿಸುವುದು.

5. **ಜನಪದರ ಪ್ರಕಾರ ಜನರೆಲ್ಲ ನೆಂಟರಾಗುವುದು ಯಾವಾಗ?**

ಉ. ಉಂಡು-ಉಟ್ಟು ನಾವು ಚೆನ್ನಾಗಿ ಇರುವಾಗ ಮಾತ್ರ ಜನರೆಲ್ಲ ನೆಂಟರಾಗುವರು.

ಇ. **ಕೆಳಗಿನ ಪ್ರಶ್ನೆಗಳಿಗೆ ಮೂರು-ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿರಿ.**

1. **ತಾಯಿ ತನ್ನ ಮಗು ಯಾವ ಗುಣಗಳಿಂದ ಜಗಕ್ಕೆ ಜ್ಯೋತಿಯಾಗಬೇಕೆಂದು ಬಯಸುತ್ತಾಳೆ?**

ಉ. ತಾಯಿ ತನ್ನ ಮಗು ಆಚಾರ-ವಿಚಾರಗಳಿಂದ, ನೀತಿಯುತ ನಡವಳಿಕೆ ಉಳ್ಳವನಾಗಬೇಕು ಎಂದು ಬಯಸುತ್ತಾಳೆ. ಮಾತಿನಲ್ಲಿ ನಯ ವಿನಯಗಳಿಂದ ಕೂಡಿದ ನಡವಳಿಕೆಗಳಿಂದ ಶ್ರೇಷ್ಠ ವ್ಯಕ್ತಿಯಾಗಿ ಜಗತ್ತಿಗೆ ಮಾರ್ಗದರ್ಶನ ಮಾಡುವ ಗುಣಗಳಿಂದ ಜಗಕ್ಕೆ ಜ್ಯೋತಿಯಾಗಬೇಕೆಂದು ಬಯಸುತ್ತಾಳೆ.

2. **ತಾಯಿ ತನ್ನ ಮಗುವಿನಲ್ಲಿ ಒಳ್ಳೆಯ ಗುಣಗಳಿರಬೇಕೆಂದು ಏಕೆ ಬಯಸುತ್ತಾಳೆ?**

ಉ. ಒಳ್ಳೆಯ ಗುಣಗಳಿದ್ದರೆ ಜಗತ್ತಿನಲ್ಲಿ ಆದರ್ಶಪ್ರಾಯನಾದ ವ್ಯಕ್ತಿಯಾಗುತ್ತಾನೆ. ಒಳ್ಳೆಯ ಗುಣಗಳಿಂದಲೇ ಸಂಸಾರವೆಂಬ ಸಾಗರವನ್ನು ಈಸಬಹುದು. ಅದಕ್ಕೆ ವಿದ್ಯಾವಂತನಾಗಬೇಕು. ಬದುಕಿನಲ್ಲಿ ಸಿರಿತನ ಬಡತನಗಳು ಶಾಶ್ವತವಲ್ಲ. ಇವೆಲ್ಲವನ್ನು ಸಮಾನ ಭಾವದಿಂದ ಎದುರಿಸಲು ಒಳ್ಳೆಯ ಗುಣಗಳಿರಬೇಕು. ಆದುದರಿಂದ ತಾಯಿ ತನ್ನ ಮಗುವಿನಲ್ಲಿ ಒಳ್ಳೆಯ ಗುಣಗಳಿರಬೇಕೆಂದು ಬಯಸುತ್ತಾಳೆ.

3. **ಜನಪದರು ಸಂಸಾರವನ್ನು ಸಾಗರಕ್ಕೆ ಏಕೆ ಹೋಲಿಸಿದ್ದಾರೆ?**

ಉ. ಸಂಸಾರವೆಂಬುದು ಸಾಗರ. ಏಕೆಂದರೆ ಸಾಗರದಲ್ಲಿ ತೆರೆಗಳು, ತಡೆಗಳು ಇರುತ್ತದೆ. ಸಾಗರವನ್ನು ಈಜುವುದು ಬಲು ಕಷ್ಟ. ಅಂತೆಯೇ ಸಂಸಾರದಲ್ಲಿಯೂ ಅನೇಕ ಕಷ್ಟ ಸುಖಗಳಿವೆ. ಅದನ್ನು ಎದುರಿಸುವುದೂ ಸುಲಭವಲ್ಲ. ಅದಕ್ಕೆ ಓದು ಮತ್ತು ಬುದ್ಧಿಶಕ್ತಿಗಳಿರಬೇಕು. ಈ ಕಾರಣದಿಂದ ಜನಪದರು ಸಂಸಾರವನ್ನು ಸಾಗರಕ್ಕೆ ಹೋಲಿಸಿದ್ದಾರೆ.

Scanned with CamScanner